ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

39

ಇಲಾಖೆ / ವಿಷಯ : DEPARTMENT / SUBJECT: ಸಂಸತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ ದಿನಾಂಕ : DATE: 26/3/21

# ಲೋಕಸಭೆ ಕಲಾಪ ಅನಿರ್ದಿಷ್ಟ ಮುಂದಕ್ಕೆ

ವಿಶ್ವ 26/3/21

**ದೆಹಲಿ:** ಲೋಕಸಭೆಯ ಕಲಾಪವನ್ನು ಗುರುವಾರ ಅನಿರ್ದಿಷ್ಟ ಅವಧಿಗೆ ಮುಂದೂಡಲಾಯಿತು. ಇದರೊಂದಿಗೆ ಸುಮಾರು ಎರಡು ತಿಂಗಳ ಅವಧಿಯ ಸುದೀರ್ಘ ಬಜೆಟ್ ಅಧಿವೇಶನಕ್ಕೆ ತೆರೆ ಬಿದ್ದಂತಾಗಿದೆ. ಈ ಅಧಿವೇಶನದಲ್ಲಿ ಶೇ. 114 ರಷ್ಟು ಸಫಲತೆ ಕಂಡುಬಂದಿದೆ.

ಜನವರಿ 29 ರಂದು ಅಧಿವೇಶನ ಆರಂಭವಾಗಿತ್ತು. ಏಪ್ರಿಲ್ 8 ಕ್ಕೆ ಕೊನೆಗೊಳ್ಳಬೇಕಿತ್ತು. ಆದರೆ ಐದು ರಾಜ್ಯಗಳ ಚುನಾವಣೆ ಪ್ರಚಾರದಲ್ಲಿ ಪಾಲ್ಗೊಳ್ಳಬೇಕಿರುವುದರಿಂದ ಅಧಿವೇಶನವನ್ನು ಮೊಟಕುಗೊಳಿಸುವಂತೆ ಅನೇಕ ಸದಸ್ಯರು ಸ್ಪೀಕರ್ ಓಂ ಬಿರ್ಲಾ ಅವರಿಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಬೇಗ ಮುಗಿಸಲು ನಿರ್ಧರಿಸಲಾಯಿತು.

ಸ್ಪೀಕರ್ ಓಂ ಬಿರ್ಲಾ ಅವರಿಗೆ ಕರೋನಾ ಪಾಸಿಟಿವ್ ವರದಿ ಬಂದಿರುವುದರಿಂದ ಕೊನೇ ವಾರದ ಕಲಾಪದಲಿ ಅವರು ಭಾಗವಹಿಸಿರಲಿಲ್ಲ. ಕಡೆಯ ದಿನದ ಕಲಾಪದಲ್ಲಿ ಪ್ರಧಾನಿ ಮೋದಿ, ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಸಚಿವ ಸಂಪುಟದ ಹಿರಿಯ ಸದಸ್ಯರು ಭಾಗವಹಿಸಿದ್ದರು. ಸ್ಪೀಕರ್ ಬಿರ್ಲಾ ಅವರು ಬೇಗ ಗುಣಮುಖರಗಲಿ ಎಂದು ಎಲ್ಲರೂ ಹಾರೈಸಿದರು.

ಜನವರಿ 29 ರಂದು ಅಧಿವೇಶನ ಆರಂಭವಾದ ದಿನ ರಾಷ್ಟ್ರಪತಿಯವರ ಭಾಷಣವನ್ನು ಬಹುತೇಕ ಪ್ರತಿಪಕ್ಷಗಳು ಬಹಿಷ್ಕರಿಸಿದ್ದವು. ಕೃಷಿ ಕಾಯಿದೆ ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟ ಬೆಂಬಲಿಸಿ ಅವರು ಈಕ್ರಮ ಕೈಗೊಂಡರು.